Doc. 28
T-P-2

(1)

R No KRNN 12 30-4-71

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂವೇಷಿಸಿದ ಪತ್ರಿಕೆ

First Golden Jubilee Celebrated Paper in The State

** Now in 57th Year **

'Satyavadi' daily, Mysore 4

ಪ್ರಕಾಶಕರು ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಎಸ್.ಕೆ.ಶಾಂತಿನಾಥ ಎಂ. ಎಸ್. ಕೃಷ್ಣರಾವ್ (3 ಪ್ರ

ತೆರಿಗೆ ಏರಿಕೆ ಮಾಡಲು ಧಾರಿಯಾ ಸಲಹೆ

ಭರವಸೆ

ಬೆಂಗಳೂರು— ಮೈಸೂರು ನಗರದಲ್ಲಿ ಕೆಲವು ದಿವಸಗಳಿಂದ ಒದಗಿರುವ ನೀರಿನ ಕ್ಷಾಮವನ್ನು ಪರಿಪಡಿಸಲು ತ್ವರಿತ ಕ್ರಮ ಕೈಗೊಳ್ಳಲಾಗುವುದೆಂದು ಶಾಸನ ಸಭೆಯಲ್ಲಿ ಭರವಸೆ ನೀಡಲಾಯಿತು.

★

ನಿಕ್ಸನ್ ವಿರುದ್ಧ

ವಾಷಿಂಗ್ಟನ್— ಅಧ್ಯಕ್ಷ ನಿಕ್ಸನ್ನರ ಮೇಲೆ ದೋಷಾರೋಪಣೆ ಮತ್ತು ಅವರು ತಪ್ಪಿತಸ್ಥರೆಂದು ತೀರ್ಮಾನಿಸಲು ಒತ್ತಾಯಕ್ಕಾಗಿ 10000 ಮಂದಿ ಮೆರವಣಿಗೆ ನಡೆಸಿದರು.

★

ಗುಟ್ಟಿನ ರೇಡಿಯೊ

ನವದೆಹಲಿ— ಮೇಘಾಲಯದ ಗಡಿಯಲ್ಲಿ ಗುಟ್ಟಾದ ರೇಡಿಯೋ ಸ್ಟೇಷನ್ನುಗಳ ಜಾಲತಿಯಲ್ಲಿ ವಿದೇಶೀಯರ ಕೈವಾಡ ವಿದೆ ಎಂದು ಲೋಕಸಭೆಯಲ್ಲಿ ಸದಸ್ಯರು ಸೂಚಿಸಿದರು

★

ಚಲನಚಿತ್ರ ಕಾರ್ಪೊರೇಷನ್

ಬೆಂಗಳೂರು— ಮುದಂತಿಸು ಹೈ ಕೋರ್ಟು ದಿವಾಳಿ ಎಂದು ಘೋಷಿಸಿರುವ ವ್ಯಕ್ತಿಯನ್ನು ರಾಜ್ಯದ ಫಿಲಂ ಅಭಿವೃದ್ಧಿ ಕಾರ್ಪೊರೇಷನ್ನಿನ ಸದಸ್ಯರನ್ನಾಗಿ ನೇಮಿಸಿರುವ ಬಗ್ಗೆ ಶಾಸನಸಭೆಯಲ್ಲಿ ಸದಸ್ಯರು ತೀವ್ರ ಆಕ್ಷೇಪಿಸಿದರು — ಈ ವಿಷಯದಲ್ಲಿ ನ್ಯಾಯಾಂಗ ಅಭಿಪ್ರಾಯ ಒದಗಿಸಲು ಆರ್ಥ ಮಂತ್ರಿಗಳು ಒಪ್ಪಿದರು — ಇದು ಮುಖ್ಯ ಮಂತ್ರಿಗಳ ಸಹೋದರ ಶ್ರೀ ಡಿ ಕೆಂಪರಾಜ ಅರಸ್ ರವರ ವಿಷಯದಲ್ಲಿ.

★

ಸವರನ್ ಬೆಲೆ

ಬೆಂಗಳೂರು— ಸವರನ್ ರೂ. 415

ರೈಲ್ವೆಗಳಿಗೆ ನಷ್ಟ

ನವದೆಹಲಿ — 73-74 ರಲ್ಲಿ ವಿನಾಶಕಾರಿ ಕೃತ್ಯಗಳು ಮತ್ತು ತೀವ್ರ ಚಳವಳಿಗಳಿಂದ ರೈಲುಗಳಿಗೆ ರೂ 13 ಲಕ್ಷ ನಷ್ಟವಾಗಿದೆಯೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

★

ಪಶುಸಂಗೋಪನ ಸೆಮಿನಾರ್

ನಾಗಪುರ— ಪಶುಸಂಗೋಪನ ಮತ್ತು ಕ್ಷೀರಕ್ಷೇತ್ರ ಅಭಿವೃದ್ಧಿ ಬಗ್ಗೆ 2 ದಿನಗಳ ಸೆಮಿನಾರು ವಾರ್ಧಾದಲ್ಲಿ ಜುಲೈ 13-14 ರಂದು ನಡೆಯಲಿದೆ — ಆಚಾರ್ಯ ವಿನೋಬ ರವರು ನೇತೃತ್ವ ವಹಿಸುವ ನಿರೀಕ್ಷೆ.

○

ಭಾರತಕ್ಕೆ ನೆರವು

ನವದೆಹಲಿ— ಅಂತರ ರಾಷ್ಟ್ರೀಯ ಹಣದ ನಿಧಿಯಿಂದ ಭಾರತ ಸರಕಾರ ಮತ್ತೆ 91.5 ಡಾಲರು ಸಾಲವನ್ನು ಪಡೆಯಿತು.

★

ನೋಬಲ್ ಪಾರಿತೋಷಕ

ಸ್ಟಾಕ್‌ಹೋಂ— ಹಣದುಬ್ಬರವನ್ನು ಉಭಯಸಮುಪಡಿಸಲು ಸ್ವೀಡಿಷ್ ನೋಬಲ್ ಫೌಂಡೇಷನ್ ಪಾರಿತೋಷಕ ಹಣವನ್ನು 118000 ಡಾಲರುಗಳಿಂದ 130000 ಡಾಲರುಗಳಿಗೆ ಹೆಚ್ಚಿಸಿದೆ — ಫೌಂಡೇಷನ್ನಿನ ಆಸ್ತಿ ಜನವರಿ 1 ರಂದು 35 ಮಿಲಿಯ ಡಾಲರ್ ಇದ್ದು ಕಳೆದ ವರ್ಷದಿಂದ 1 ಮಿಲಿಯ ಡಾಲರು ಹೆಚ್ಚುತ್ತಿದೆ.

★

ಶ್ರೇಷ್ಠ ಕಲಾಕೃತಿ ಕಳವು

ಐರ್ಲೆಂಡಿನ ಬ್ಲೆಸಿಂಗ್‌ಟನ್ನಿನ ಕೋಟ್ಯಾಧೀಶನ ನಿವಾಸದ ಮೇಲೆ ಬಂದೂಕ ಹಿಡಿದಿದ್ದ ಗುಂಪು ಧಾಳಿ ನಡೆಸಿ, ರೂ. 8.5 ಮಿಲಿ ಮೌಲ್ಯದ ಶ್ರೇಷ್ಠ ಕಲಾಕೃತಿಗಳನ್ನು ಅಪಹರಿಸಿಕೊಂಡು ಹೋದರು.

★

ಹೆಚ್ಚಿಗೆ ತೆರಿಗೆ

ನವದೆಹಲಿ— ಬೆಲೆ ಏರಿಕೆ ಇದ್ದರೂ ಈ ವರ್ಷದ ಯೋಜನೆಯಲ್ಲಿಯ ಅವಶ್ಯಕತೆಗೆ ಕೇಂದ್ರ ಮತ್ತು ರಾಜ್ಯಗಳು ಹೆಚ್ಚಿಗೆ ತೆರಿಗೆ ವಿಧಿಸಬೇಕೆಂದು ಪ್ಲಾನಿಂಗ್ ಸ್ಟೇಟ್ ಮಂತ್ರಿ ಶ್ರೀ ಧಾರಿಯಾರವರು ಹೇಳಿರುವರು

★

ಇರಾಕಿನಿಂದ ಎಣ್ಣೆ

ನವದೆಹಲಿ— 1974 ರಲ್ಲಿ ಭಾರತವು ಇರಾಕಿನಿಂದ 3 ಮಿಲಿಯ ಟನ್ ಕಚ್ಚಾ ಎಣ್ಣೆ ಆಮದು ಮಾಡಿಕೊಳ್ಳುವುದೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

★

ಷೇಕ್ ಅಬ್ದುಲ್ಲರ ನಾಡಿ

ಜಮ್ಮು— ಇಲ್ಲಿಗೆ ಸ್ವಲ್ಪ ದೂರದಲ್ಲಿರುವ ರಥವಾದಲ್ಲಿ ಒಂದು ಸಭೆಯಲ್ಲಿ ಷೇಕ್ ಅಬ್ದುಲ್ಲಾರು 'ಪಾಕಿಸ್ತಾನ ಅಕ್ರಮಿತ ಕಾಶ್ಮೀರ ಭಾರತದ ಭಾಗ, ಅದನ್ನು ನಾವು ಬಂಧವಿಮೋಚನ ಮಾಡಬೇಕೆಂದು ಘೋಷಿಸಿದರು ; ಭಾರತವು ನನ್ನ ದೇಶ, ಭಾರತಕ್ಕೆ ರಾಜ್ಯವು ಸೇರುವ ಒಪ್ಪಂದಕ್ಕೆ ನಾನೂ ಸಹಿ ಹಾಕಿದ್ದೇನೆ ; ಹಿಂದೆ ಸ್ವಲ್ಪ ಭಿನ್ನಾಭಿಪ್ರಾಯವಿದ್ದಿತು ; ಈಗ ನಾವು ಐಕ್ಯವಾಗಬೇಕು ; ಭಾರತವು ಸಂಯುಕ್ತ. ಒಂದೇ ಆಗಬೇಕು' ಎಂದು ಹೇಳಿದರು.

★

ದಕ್ಷಿಣ ಕನ್ನಡ ಬಂದ್

ಮಂಗಳೂರು — ಕಲ್ಲಡಕ ಮತ್ತು ಪಾಡಿಲ್‌ನಲ್ಲಿ ಪೋಲೀಸರು ನಡೆಸಿದ ದಬ್ಬಾಳಿಕೆಯನ್ನು ಪ್ರತಿಭಟಿಸಲು ಮತ್ತು ಅಕ್ಕಿ ಸಾಗಣಿಕೆ ಮೇಲಿನ ಪ್ರತಿಬಂಧಕ ತೆಗೆಯಲು ಒತ್ತಾಯ ಮಾಡುವದಕ್ಕಾಗಿ ತಾ|| 4 ರಂದು ದಕ್ಷಿಣ ಕನ್ನಡ ಬಂದ್‌ಗೆ ಜನ ಸಂಘ ಕರೆಕೊಟ್ಟಿದೆ

★

ಬೆಲೆ ಹೆಚ್ಚುಸುಲ್ಲ

ನವದೆಹಲಿ— ಸಧ್ಯಕ್ಕೆ ಸೀಮೆಎಣ್ಣೆ ಬೆಲೆ ಹೆಚ್ಚಿಸುವ ಇಚ್ಛೆ ಸರಕಾರಕ್ಕಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

★

ಅಕ್ಕಿ ದಾಸ್ತಾನು

ನವದೆಹಲಿ— ಏಪ್ರಿಲ್ 1 ರಂದು ಕೇಂದ್ರ ಮತ್ತು ರಾಜ್ಯ ಸರಕಾರಗಳ ವಶದಲ್ಲಿ 2 021 ಮಿಲಿಯ ಟನ್ ಅಕ್ಕಿ ಇದ್ದಿತೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ರಾಜ್ಯಗಳ ಸ್ವಾತಂತ್ರ್ಯ

ಸೇಲಂ — ಡಿ ಎಂ ಕೆ ಸರಕಾರ ಕೇಳಿರುವ ರಾಜ್ಯಗಳ ಸ್ವಾತಂತ್ರ್ಯ ಕೊಟ್ಟರೆ, ಕೇಂದ್ರವು ಒಂದು ನಕಲಿ ಸರಕಾರವಾಗಿ, ರಾಷ್ಟ್ರದ ಭದ್ರತೆ ಮತ್ತು ಭಾವೈಕ್ಯವು ತೊಂದರೆಗೀಡಾವುದೆಂದು, ಇಲ್ಲಿ ನಡೆದ ಜನ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ನಿರ್ಣಯಿಸಲಾಯಿತು.

○

ಚಲನಚಿತ್ರ ಅದಲುಬದಲು

ಬೊಂಬಾಯಿ— ಭಾರತ ಮತ್ತು ಬಂಗ್ಲಾದೇಶಗಳಲ್ಲಿ ಪ್ರತಿವರ್ಷ ರೂ. 15 ಲಕ್ಷ ಮೌಲ್ಯದ ಚಲನಚಿತ್ರಗಳ ಅದಲುಬದಲಿಗೆ ಒಪ್ಪಂದವಾಗಿದೆ.

★

ದೊರೆತಿರುವ ಗೋಧಿ

ನವದೆಹಲಿ— ತಾ|| 26 ರವರೆಗೆ ಆರು ರಾಜ್ಯಗಳಲ್ಲಿ ರೈತರಿಂದ ಸಗಟು ವ್ಯಾಪಾರಿಗಳು ಸುಮಾರು 48000 ಟನ್ ಗೋಧಿ ಕೊಂಡುಕೊಂಡಿರುವದಾಗಿ ಪ್ರಕಟವಾಗಿದೆ

●

† ಕೊಟ್ಟಯಂ— ಮನೆಯಿಂದ ಸ್ವಲ್ಪ ದೂರದಲ್ಲಿ ಒಂದು ಬಸ್ಸು ಒಂದು ಆಳವಾದ ಹಳ್ಳಕ್ಕೆ ಬಿದ್ದು 32 ಮಂದಿ ಸತ್ತರು.

★ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರಕಾರ 5 ನೇ ಯೋಜನೆ ಆರಂಭದಲ್ಲಿ ತಮ್ಮ ನೀತನ ಬಿಲ್‌ಗಳಲ್ಲಿ ಪ್ರತ್ಯೇಕ ತುಟ್ಟಿಭತ್ಯ ರೂ. 2200 ಕೋಟಿ ಸೇರಿಸಿದೆ.

★ ಚೀನಾದಲ್ಲಿ ಸಾಂಸ್ಕೃತಿಕ ಕ್ರಾಂತಿ ಕಾಲದಲ್ಲಿ ನಾಶ ಮಾಡಲಾದ ಬುದ್ಧ ದೇವಾಲಯಗಳ ಪುನರ್ರಚನೆ ಮಾಡಲಾಗುತ್ತಿದೆಯೆಂದು ಜಪಾನಿ ಬೌದ್ಧ ನಾಯಕರು ತಿಳಿಸಿದರು

ವಿವಾಹ ಮಹೋತ್ಸವ

ಚಿ|| ಸೌ|| ಅಶಾದೇವಿ (ಮೈಸೂರಿನ ಶ್ರೀ ಎಂ. ಚಾಲಾಜಿ ಸಿಂಗ್‌ರವರ ಸ್ನುತ್ರಿ) ಚಿ|| ಎನ್. ಜಿ. ಈಶ್ವರ ಸಿಂಗ್ (ಬೆಂಗಳೂರಿನ ಶ್ರೀ ಎನ್. ಜೆ ಸೋಮು ಸಿಂಗ್‌ರವರ ಪುತ್ರ) ಮತ್ತು ಚಿ|| ಸೌ|| ವೀಣಾದೇವಿ (ಶ್ರೀ ಎಂ. ಚಾಲಾಜಿಸಿಂಗ್ ರವರ ಪುತ್ರಿ) ಚಿ|| ನರೇಂದ್ರ ಸಿಂಗ್ (ಬೆಂಗಳೂರಿನ ಶ್ರೀ ಬಿ. ಸಿಂಗ್‌ರವರ ಸಹೋದರ) ಇವರ ವಿವಾಹ ಮಹೋತ್ಸವ ಈ ತಿಂಗಳು 28 ರಂದು ಮೈಸೂರಿನಲ್ಲಿ ವಿಜೃಂಭಣೆಯಿಂದ ನೆರವೇರಿತು.

ವುಡ್‌ಲಾಂಡ್ಸ್ 25 4 74 ರಿಂದ

ಅವೋಘ ಆರಂಭ

ಉ ಪಾ ಸ ನೆ

ಕನ್ನಡ ಕಲರ್ ಮಹೋನ್ನತ ಚಿತ್ರ ದಿನ 3 ಪ್ರದರ್ಶನಗಳು

ಪಾತ್ರ : ಆರತಿ ಡಾ|| ಮಣ್ಣೂರ್ ಶಿವರಾಂ ಕೆ. ಎಸ್. ಅಶ್ವತ್ಥ್, ಲೀಲಾವತಿ ಮುಂತಾದವರು ದಿಗ್ದರ್ಶಕ : ಎಸ್. ಆರ್. ಪುಟ್ಟಣ್ಣ ಕಣಗಾಲ್

25-4-74 ರಿಂದ ಬಾಲ್ಕನಿ ತರಗತಿಗಳಿಗೆ ಮಾತ್ರ ಮುಂಚಿತವಾಗಿ ಟಿಕೆಟ್ ಕೊಡಲಾಗುವುದು ದಿನ ಬೆಳಿಗ್ಗೆ 10-30 ರಿಂದ 11-30 ರ ವರೆಗೆ

For Large Range of Daily Wear-

Nylex, Cotton, Voile, etc. Sarees in up-to-date Designs

Please Visit :

Bank Road Bahusar

ಅ ಪೆ ರಾ 26 4 74 ರಿಂದ

ನಾಗ್ ಮೋರೆ ನಾಥಿ

ರೋಮ್ಯಾಂಚಕಾರಿ ಹಿಂದಿ ವರ್ಣ ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally to the National Defence Fund

Quality Printing Neat Binding

Lakshminarasimha Press

Sivarampet, Mysore 1

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Edited Printed and Published by Dharmapracharanirata M S. Krishna Rao (Proprietor) at the Satyawadi Press, Chamaraja puram Mysore